ನೂಪುರ ಭ್ರಮರಿ
...ನರ್ತನ ಜಗತ್ತಿಗೊಂದು ಪರಿಭ್ರಮಣ

‘ಸಾನ್ನಿಧ್ಯ’,
ದೇಚೂರು ರಸ್ತೆ, ಅಶ್ವತ್ಥಕಟ್ಟೆ
ಹತ್ತಿರ, ಮಡಿಕೇರಿ,
ಕೊಡಗು 571201.

ಮತ್ತು ಅಂಗಸಂಸ್ಥೆಯಾದ

**ನೃತ್ಯ ಸಂಶೋಧಕರ ಒಕ್ಕೂಟ**

ಮತ್ತು

**ಭಾರತೀಯ ವಿದ್ಯಾಭವನ,**

ಬೆಂಗಳೂರು

ಇವರ ಜಂಟಿ ಸಹಭಾಗಿತ್ವದಲ್ಲಿ

PLATINUM JUBILEE OF BHARATIYA VIDYA BHAVAN 1938 – 2013 75 125 BIRTH ANNIVERSARY OF FOUNDER K.M. MUNSHI

# ನೃತ್ಯ ಸಂಶೋಧನ ಸಮ್ಮೇಳನ-2013

**ವಿಷಯ: ‘ನೃತ್ಯ ಸಂಶೋಧನೆ: ಪ್ರಸ್ತುತತೆ ಮತ್ತು ಸಾಧ್ಯತೆಗಳು’**

**ದಿನಾಂಕ: 15 ಫೆಬ್ರವರಿ, 2013**

**ಸ್ಥಳ: ಭಾರತೀಯ ವಿದ್ಯಾಭವನ,
ರೇಸ್‌ಕೋರ್ಸ್ ರಸ್ತೆ,
ಬೆಂಗಳೂರು – 560 001**

ಅವಿಚ್ಛಿನ್ನವಾದ ನೃತ್ಯಸಂಸ್ಕೃತಿಗೆ ಸಂಬಂಧಿಸಿದಂತೆ ವಸ್ತುನಿಷ್ಠ ಅಧ್ಯಯನ, ಕ್ರಮಬದ್ಧವಾದ ಸಂಶೋಧನಾಕ್ರಮ ಮತ್ತು ಅವಕಾಶಗಳಿಗಾಗಿ ಒಂದು ದಿನದ ಸಂಶೋಧನ ಸಮ್ಮೇಳನವನ್ನು ನೂಪುರ ಭ್ರಮರಿ ಪ್ರತಿಷ್ಠಾನದ ಅಂಗಸಂಸ್ಥೆಯಾದ Dance Researchers’ Forum (ನೃತ್ಯ ಸಂಶೋಧಕರ ಒಕ್ಕೂಟ)ವು ಫೆಬ್ರವರಿ 15, 2013ರಂದು ಬೆಂಗಳೂರಿನಲ್ಲಿ ಆಯೋಜಿಸಲಿದೆ. ಹಿರಿಯ ಸಂಶೋಧಕರು ಮತ್ತು ವಿದ್ವತ್ ವಲಯದ ಉಪಸ್ಥಿತಿಯಲ್ಲಿ ವಾರ್ಷಿಕ ವಿಶೇಷ ಸಂಚಿಕೆ, ಸಂಶೋಧನ ನಿಯತಕಾಲಿಕೆ, ಪ್ರಾಯೋಗಿಕ ಮತ್ತು ಶಾಸ್ತ್ರಾಧಾರಿತ ಅಭಿವ್ಯಕ್ತಿ, ಪುಸ್ತಕ ಅನಾವರಣ, ಸಂಶೋದನ ಲೇಖನ ಮಂಡನೆ ಮತ್ತು ಪ್ರಶಸ್ತಿ ವಿತರಣೆ ಸಮ್ಮೇಳನದ ಪ್ರಮುಖ ಘಟ್ಟಗಳಾಗಿರುತ್ತವೆ. ಈ ಸಂದರ್ಭದಲ್ಲಿ ಆಸಕ್ತ ಸಂಶೋಧಕರು, ಹಿರಿಯ ಕಲಾವಿದರು, ಸಂಶೋಧನ ವಿದ್ಯಾರ್ಥಿಗಳಿಗೆ (ಪಿಎಚ್‌ಡಿ/ಎಂಎ/ಎಂಫಿಲ್) ಸಂಶೋಧನ ಲೇಖನಗಳ ಮಂಡನೆಗೆ ಅವಕಾಶವಿದ್ದು, ಲೇಖಕರು-ವಿದ್ವಾಂಸರು-ಮಾಧ್ಯಮ ಪ್ರತಿನಿಧಿಗಳು-ವಿದ್ಯಾರ್ಥಿಗಳೂ ಕೂಡಾ ಸಮ್ಮೇಳನದಲ್ಲಿ ಭಾಗವಹಿಸಬಹುದು.

ನೂಪುರ ಭ್ರಮರಿ ನಾಡಿನ ಹೆಸರಾಂತ ಕಲಾನಿಯತಕಾಲಿಕೆಯಾಗಿ ಮೊದಲ್ಗೊಂಡು ಪ್ರತಿಷ್ಠಾನ ಮತ್ತು ಪ್ರಕಾಶನಸಂಸ್ಥೆಯಾಗಿ ರೂಪ ಪಡೆದು ಇದೀಗ ನೃತ್ಯ ಸಂಶೋಧಕರ ಒಕ್ಕೂಟ (Dance Researchers’ Forum) ಎಂಬ ಸಂಶೋಧನೆಗೆ ಮೀಸಲಾದ ವಿಭಾಗವನ್ನೂ ಪ್ರಾರಂಭಿಸಿದೆ. ಈ ಒಕ್ಕೂಟವು ಫೆಬ್ರವರಿ 20, 2012ರ ಮಹಾಶಿವರಾತ್ರಿಯ ಶುಭಾವಸರದಲ್ಲಿ ವಿಧ್ಯುಕ್ತವಾಗಿ ಉದ್ಘಾಟನೆಗೊಂಡಿದೆ. ಉದ್ಘಾಟನೆಗೊಂಡ ದಿನದಿಂದ ಈ ವರೆಗೆ ಕರ್ನಾಟಕ ಮತ್ತು ಹೊರರಾಜ್ಯದ ಸುಮಾರು 40ಕ್ಕಿಂತಲೂ ಹೆಚ್ಚಿನ ಮಂದಿ ಸಂಶೋಧನಾಸಕ್ತರು ಇದರ ಸದಸ್ಯರಾಗಿದ್ದು ಕಲಾಸಂಶೋಧನೆಯ ಅನಿವಾರ್ಯತೆಯ ಹಿನ್ನೆಲಿ ಮತ್ತು ವೇದಿಕೆ ಕಲ್ಪಿಸಿಕೊಡಬೇಕಾದ ನೆಲೆಗಳನ್ನು ಸ್ಪಷ್ಟಪಡಿಸುತ್ತಿದೆ. ಹೆಸರಾಂತ ಸಂಶೋಧಕರೂ, ವಿದ್ವಾಂಸರೂ ಆದ ಶತಾವಧಾನಿ ಡಾ. ಆರ್. ಗಣೇಶ್, ಎಚ್.ಎಸ್. ಗೋಪಾಲ್ ರಾವ್ ಮುಂತಾದವರ ಪ್ರಧಾನ ಸಲಹಾಸಮಿತಿಯ ಹಿನ್ನೆಲೆಯಲ್ಲಿ ಆಡಳಿತ, ಶೈಕ್ಷಣಿಕ, ಪ್ರದರ್ಶನ, ಗ್ರಂಥಾಲಯ ಮತ್ತು ಕಛೇರಿಗಳೆಂಬ ಐದು ವಿಭಾಗಗಳು ಕಾರ್ಯನಿರ್ವಹಿಸುತ್ತಿದ್ದು; ಮುಂದಿನ ದಿನಗಳಲ್ಲಿ ಉಪವಿಭಾಗಗಳನ್ನೂ, ನಾಡಿನೆಲ್ಲೆಡೆ ಉಪಕೇಂದ್ರಗಳನ್ನೂ ಪ್ರಾರಂಭಿಸುತ್ತಿದೆ. ಒಕ್ಕೂಟದ ಯೋಜನೆಗಳ ಪೈಕಿ ವಾರ್ಷಿಕ ಕಲಾ ಸಂಶೋಧನ ಸಮ್ಮೇಳನ, ನೃತ್ಯ ಸಂಶೋಧನ ಪುಸ್ತಕ ಪ್ರಕಟಣೆ, ಕಲಾಸಂಶೋಧನೆಗೆ ಮೀಸಲಾದ ವಿಶೇಷ ಸಂಶೋಧನಾ ನಿಯತಕಾಲಿಕೆ, ಕಲಾ ಸಂಶೋಧನೆಗೆ ಪ್ರತ್ಯೇಕವಾದ ಗ್ರಂಥಾಲಯ, ವಿಕಸನ ಗೋಷ್ಠಿ ಮತ್ತು ಅಧ್ಯಯನ ಸ್ವರೂಪದ ಕಮ್ಮಟ-ಕಾರ್ಯಾಗಾರ-ಉಪನ್ಯಾಸ-ಪ್ರಾಯೋಗಿಕ ಪರಿಷ್ಕರಣಗಳು ಪ್ರಧಾನವಾದವುಗಳು. ಇವುಗಳೊಂದಿಗೆ ನೂಪುರ ಭ್ರಮರಿ ಟ್ರಸ್ಟ್‌ನ ಹೆಮ್ಮೆಯ ನೂಪುರ ಭ್ರಮರಿ ದ್ವೈಮಾಸಿಕ, ವರ್ಷದ ಕಲಾ ವಿಮರ್ಶೆ ಪ್ರಶಸ್ತಿ, ಪ್ರಕಾಶನ ಮತ್ತು ಪ್ರಕಟಣೆಗಳು ಸಂಸ್ಥೆಯ ಧ್ಯೇಯೋದ್ದೇಶವನ್ನು ಮತ್ತಷ್ಟು ದೃಢಪಡಿಸಿವೆ.

**ಸಮ್ಮೇಳನದ ಪ್ರಮುಖ ವಿಷಯಗಳು:**

**ನೃತ್ಯ ಇತಿಹಾಸ, ನೃತ್ಯಶೈಲಿಯ ಪುನರ್ ರಚನೆ ಮತ್ತು ಮಾಧ್ಯಮ ಸಂಬಂಧ ವಿಶ್ಲೇಷಣೆ.**

**ಇತರೆ ವಿಚಾರಪ್ರಸ್ತಾಪಗಳು:**

**ನೃತ್ಯದ ಶಾಸ್ತ್ರೀಯತೆ, ವ್ಯಾಖ್ಯಾನ, ಶೈಕ್ಷಣಿಕ ನೆಲೆ, ಸಮಕಾಲೀನ ಬೆಳವಣಿಗೆ, ಸಾಮಾಜಿಕ ಪರಿಕಲ್ಪನೆ, ಸಂಗೀತ, ಜನಪದ ಇತ್ಯಾದಿ.**

**ಪ್ರವೇಶಗಳನ್ನು ಕಳಿಸಿಕೊಡಲು ಅಂತಿಮ ದಿನಾಂಕ:**

**ನವೆಂಬರ್ 25. 2012.**

## ನಿಯಮಾವಳಿಗಳು

- ಸಂಶೋಧನ ಲೇಖನವು ನೂತನವಾಗಿದ್ದು ಈ ಹಿಂದೆ ಎಲ್ಲಿಯೂ ಮಂಡನೆಯಾಗಲೀ, ಪ್ರಕಟವಾಗಲೀ ಆಗಿರಕೂಡದು. ಕನ್ನಡ/ಇಂಗ್ಲೀಷ್/ಹಿಂದಿ ಭಾಷೆಯಲ್ಲಿ ಪ್ರಬಂಧ ಮಂಡಿಸಬಹುದಾದರೂ ಬರೆವಣಿಗೆ ಮಾತ್ರ ಕನ್ನಡ ಅಥವಾ ಇಂಗ್ಲೀಷ್‌ನಲ್ಲಿರಬೇಕು. ನೃತ್ಯಸಂಸ್ಕೃತಿ ಪರವಾದ ವಿಚಾರಗಳ ಮಂಥನಕ್ಕೆ ಅನುಕೂಲವೆನಿಸುವ ಪ್ರಾಯೋಗಿಕ ನೆಲೆಯುಳ್ಳ ಪ್ರವೇಶಗಳಿಗೆ ಮೊದಲ ಆದ್ಯತೆ. ಯಾವುದೇ ಭಾಷಾ/ಪ್ರಾದೇಶಿಕ ಮಿತಿಗಳಿರುವುದಿಲ್ಲ.
- ಲೇಖನ ಪ್ರಕಟಣೆಯ ಸಂಪೂರ್ಣ ಹಕ್ಕು ಪ್ರತಿಷ್ಠಾನದ್ದು. ಸಮ್ಮೇಳನದ ತರುವಾಯ ಲೇಖನಗಳ ಸಂಪೂರ್ಣ ಪ್ರತಿಯನ್ನು ಜಾಗತಿಕ ನೆಲೆಯಲ್ಲಿ ನಿಯತಕಾಲಿಕವಾಗಿ ಹೊರತರಲಾಗುವುದು. ಆದರೆ ಈ ಪ್ರಕಟಣೆಗೂ ಮುಂಚೆ ಲೇಖನ/ಪ್ರಬಂಧಗಳು ಮತ್ತಾವುದೇ ಪ್ರಕಟಣೆಯಲ್ಲಿ ಮಂಡಿತ/ಪ್ರಕಟಿತವಾದರೆ ಅಂತಹ ಲೇಖನಗಳನ್ನು ನಿಯತಕಾಲಿಕೆಯ ಪ್ರಕಟಣೆಯಲ್ಲಿ ತಡೆಹಿಡಿಯಲಾಗುವುದು. ಸಮ್ಮೇಳನದಲ್ಲಿ ಮಂಡಿತವಾದ ಲೇಖನಗಳನ್ನು ತಜ್ಞರ ಸಲಹೆ ಸೂಚನೆಗಳಡಿಯಲ್ಲಿ ಸಮ್ಮೇಳನದ ದಿನದಿಂದ ಆರು ತಿಂಗಳ ಒಳಗಾಗಿ ಎಲ್ಲಾ ಕ್ರಮಬದ್ಧವಾದ ದಾಖಲೆಗಳೊಂದಿಗೆ ಒಕ್ಕೂಟಕ್ಕೆ ತಲುಪಿಸಲು ಅವಕಾಶವಿದ್ದು; ಸಮಯಮಿತಿ ಮೀರಿದವರನ್ನು ಪರಿಗಣಿಸಲಾಗುವುದಿಲ್ಲ.
- ಸಂಶೋಧನಾ ಲೇಖನಗಳ ಸಂಕ್ಷೇಪವನ್ನು ಫುಲ್‌ಸ್ಕೇಪ್ ಹಾಳೆಯಲ್ಲಿ 3 ಪುಟ ಇಲ್ಲವೇ 300 ಪದ ಮೀರದಂತೆ ಸಂಶೋಧನಾ ನಿಯಮ ರೀತಿ-ನೀತಿಗಳಿಗನುಗುಣವಾಗಿ ಕಳಿಸಬೇಕು. ಈ ಮೈಲ್ ಮೂಲಕ ಪ್ರವೇಶಗಳನ್ನು ಕಳಿಸಲು ಅವಕಾಶವಿದೆ. ಲೇಖನಗಳು ಸೈದ್ಧಾಂತಿಕವಾಗಿ ಇಲ್ಲವೇ ಪ್ರಾಯೋಗಿಕವಾದ ಪ್ರಾತ್ಯಕ್ಷಿಕೆಯ ನೆಲೆಯಲ್ಲಿಯೂ ಇರಬಹುದು. ಲೇಖನಗಳಿಗೆ ಪೂರಕವಾದ ಪ್ರಾತ್ಯಕ್ಷಿಕೆಯ ನೆಲೆಗಳನ್ನು ಅಭ್ಯರ್ಥಿಗಳೇ ಹೊಂದಿಸಿಕೊಳ್ಳಬೇಕು. ಸೈದ್ಧಾಂತಿಕವಾದ ಲೇಖನಗಳಿಗೆ ಪ್ರಾಯೋಗಿಕಸ್ಪರ್ಶದ ಅಗತ್ಯವಿದ್ದಲ್ಲಿ

ಅದನ್ನು ಅಭ್ಯರ್ಥಿಗಳು ನೆರವೇರಿಸಲು ಸಿದ್ಧವಿರಬೇಕು. ಸಂಕ್ಷೇಪದಲ್ಲಿ ಲೇಖನದ ಶೀರ್ಷಿಕೆ, ರಚನಕಾರರ ಸಹಭಾಗಿತ್ವ, ಸಂಶೋಧನಾ ಉದ್ದೇಶ, ಅಧ್ಯಯನ ವಿಧಾನ-ಕ್ರಮ-ನಡಾವಳಿ-ತರ್ಕ-ಆಧಾರಗಳು ಸ್ಪಷ್ಟವಾಗಿ ಮತ್ತು ಸಮಗ್ರವಾಗಿ ನಿರೂಪಿಸಲ್ಪಟ್ಟಿರಬೇಕು. ಪ್ರತ್ಯೇಕ ಹಾಳೆಯಲ್ಲಿ ಸ್ವವಿವರ, ಲೇಖಕರ ಸಂಶೋಧನ ಹಿನ್ನಲೆ, ಸಂಪರ್ಕ ವಿಳಾಸ, ಈಮೈಲ್ ವಿಳಾಸ, ದೂರವಾಣಿ ಸಂಖ್ಯೆಗಳನ್ನು ನಮೂದಿಸಬೇಕು.

❀ ಲೇಖನಗಳನ್ನು ಸೂಕ್ತವಾಗಿ ವಿಭಾಗಿಸಿ ಆಯ್ಕೆ ಮಾಡಿದ ತರುವಾಯ ಅವಕಾಶ ನೀಡಲಾಗುವುದು. ಸೂಕ್ತವೆನಿಸುವ ಲೇಖನಗಳು ಸಮ್ಮೇಳನದಲ್ಲಿ ಮಂಡನೆಗೆ ಅರ್ಹವಾಗಲಿದ್ದು; ಲೇಖನದ ಸತ್ವ ಮತ್ತು ಸಮಯದ ಮಿತಿಯಲ್ಲಿ ಮಂಡನೆ ಮತ್ತು ಪ್ರಶ್ನೋತ್ತರ ಸಮಯದ (5ರಿಂದ 7 ನಿಮಿಷ) ಅವಕಾಶವನ್ನೀಯಲಾಗುವುದು. ಆದಾಗ್ಯೂ ತಜ್ಞರು ಅಪೇಕ್ಷಿಸಿದಲ್ಲಿ ವಿಷಯದ ವಿಸ್ತಾರವನ್ನು ಅವಲಂಬಿಸಿ ಚರ್ಚೆ ಮುಂದುವರಿಯಬಹುದು. ಈ ಕುರಿತಂತೆ ಲೇಖನಗಳ ಆಯ್ಕೆಯ ಕುರಿತ ನಿರ್ಧಾರ ಮತ್ತು ವಿವರಗಳನ್ನು ಲೇಖನಗಳ ಸಂಕ್ಷೇಪ ತಲುಪಿದ 10 ದಿನದೊಳಗೆ ಪೂರ್ವ ತಯಾರಿಗಾಗಿ ನೀಡಲಾಗುವುದು. ಈ ಸಂದರ್ಭದಲ್ಲಿ ಲೇಖಕರು ಪೂರ್ಣ ಪ್ರತಿಯನ್ನು ಸಲ್ಲಿಸಬೇಕಾಗುತ್ತದೆ. ತರುವಾಯ ಬಂದ ಲೇಖನಗಳಿಗೆ ಅವಕಾಶವಿರುವುದಿಲ್ಲ.

❀ ಸಂಶೋಧನ ಲೇಖನ ಮಂಡಿಸುವವರಿಗೆ 21 ವರ್ಷ ಪೂರ್ಣಗೊಂಡಿದ್ದು; ಕನಿಷ್ಠಪಕ್ಷ ಪದವಿ ವಿದ್ಯಾಭ್ಯಾಸ ಪೂರ್ಣಗೊಳಿಸಿರಬೇಕು. ವಿದ್ವತ್ಪೂರ್ಣ ಸಂಶೋಧಕರಿಗೆ ಕಮ್ಮಟದ ಸಮಾಲೋಚನೆಯಲ್ಲಿ ಭಾಗವಹಿಸಲು ಅವಕಾಶವಿದೆ. ಈ ಕುರಿತಂತೆ ಆಸಕ್ತರು ಮುಂಚಿತವಾಗಿ ಹೆಸರು ನೋಂದಾಯಿಸಬೇಕು. ಸಮ್ಮೇಳನದ ಸಮಾರೋಪದಲ್ಲಿ ಅಭ್ಯರ್ಥಿಗಳಿಗೆ ಮತ್ತು ಸಂಶೋಧನ ಲೇಖನ ಮಂಡನೆ ಮಾಡುವವರಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಗುವುದು.

❀ ಪ್ರಯಾಣ ಭತ್ಯೆ, ವಸತಿ ಸೌಕರ್ಯಗಳನ್ನು ಅಭ್ಯರ್ಥಿಗಳೇ ಸ್ವಂತ ಖರ್ಚಿನಲ್ಲಿ ಭರಿಸಿಕೊಳ್ಳತಕ್ಕದ್ದು. ಸಮ್ಮೇಳನದಲ್ಲಿ ಮಾತ್ರ ಊಟೋಪಚಾರದ ವ್ಯವಸ್ಥೆಯಿರುತ್ತದೆ. ಇನ್ನುಳಿದಂತೆ ಆಸಕ್ತ ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ.

❀ ಆಯ್ಕೆ ಸಮಿತಿಯ ತೀರ್ಪುಗಾರರ, ತಜ್ಞರ ನಿರ್ಧಾರವೇ ಅಂತಿಮ. ಗುಣಮಟ್ಟವಿಲ್ಲದ ಪ್ರಬಂಧಗಳಿಗೆ ಪದವಿ/ಹಿರಿತನ/ಮಾನ್ಯತೆಗಳ ಯಾವುದೇ ದಾಕ್ಷಿಣ್ಯವಿಲ್ಲ. ಸಂಶೋಧನಾ ಲೇಖನಗಳ ಸಲ್ಲಿಕೆಗೆ ಕುರಿತಂತೆ ಮೇಲೆ ನಮೂದಿಸಲಾದ ನಿಯಮಗಳನ್ನು ಮೀರಿದಲ್ಲಿ ಅಂತಹ ಸಂಶೋಧಕರಿಗೆ ಮೂರು ವರ್ಷಗಳ ಕಾಲ ಸಮ್ಮೇಳನದಲ್ಲಿ ಪ್ರಬಂಧ ಸಲ್ಲಿಸಲು ಅವಕಾಶವಿರುವುದಿಲ್ಲ.

❀ ಸಂಶೋಧನ ಲೇಖನಗಳನ್ನು ಕಳಿಸಿದ ತರುವಾಯ ವೈಯಕ್ತಿಕ ಸಂಪರ್ಕಕ್ಕೆ, ಪ್ರಶ್ನೋತ್ತರಗಳಿಗೆ ಆಸ್ಪದವಿಲ್ಲ. ಆದರೆ ಸಂಶೋಧನ ಮಾರ್ಗದರ್ಶನ ಪಡೆದುಕೊಳ್ಳಬೇಕಿದ್ದಲ್ಲಿ ಸೂಕ್ತ ಸಮಯದಲ್ಲಿ ಸಂಪರ್ಕಿಸಬಹುದು.

## ಪ್ರವೇಶ ಶುಲ್ಕ ಕೆಳಕಂಡಂತಿದೆ:

### ಲೇಖನ ಮಂಡಿಸುವವರಿಗೆ:

☞ ನೃತ್ಯ ಸಂಶೋಧಕರ ಒಕ್ಕೂಟದ ಸದಸ್ಯರಿಗೆ: 450 ರೂ.

☞ ಸದಸ್ಯರಲ್ಲದ (ಆದರೆ ಕಳೆದ ವರ್ಷದ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ) ಇನ್ನಿತರ ಲೇಖಕರಿಗೆ: 650 ರೂ.

☞ ಸಮ್ಮೇಳನದಲ್ಲಿ ಹೊಸದಾಗಿ ಲೇಖನ ಮಂಡಿಸುವ (ಸದಸ್ಯರಲ್ಲದ) ಸಂಶೋಧಕರಿಗೆ: 950ರೂ.

☞ ಮೊತ್ತವನ್ನು ಲೇಖನ ಆಯ್ಕೆಯ ಬಳಿಕ ಪೂರ್ಣಪ್ರತಿ ಸಲ್ಲಿಸುವ ಸಮಯದಲ್ಲಿ 'ನೂಪುರ ಭ್ರಮರಿ' ಹೆಸರಿಗೆ ಡಿ.ಡಿ/ ಮನಿ ಟ್ರಾನ್ಸ್‌ಫರ್ ಮೂಲಕ ಕಳಿಸಬೇಕು.

☞ ಸಮ್ಮೇಳನದಲ್ಲಿ ಭಾಗವಹಿಸಿ ಪ್ರಮಾಣಪತ್ರ ಪಡೆದುಕೊಳ್ಳಬೇಕೆಂದಿರುವವರಿಗೆ/ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ 300ರೂ. ಈ ಬಗೆಯಾಗಿ ಸಮ್ಮೇಳನದಲ್ಲಿ ಭಾಗವಹಿಸಲಿಚ್ಛಿಸುವ ಅಭ್ಯರ್ಥಿಗಳು 18ವರ್ಷ ಮೇಲ್ಪಟ್ಟವರಾಗಿದ್ದು; ಸಮ್ಮೇಳನದಲ್ಲಿ ಬೆಳಗ್ಗೆ ಹೆಸರು ನೋಂದಾಯಿಸಿಕೊಳ್ಳತಕ್ಕದ್ದು. ನೃತ್ಯದಲ್ಲಿ ಒಂದಷ್ಟು ಪ್ರೌಢ ಶಿಕ್ಷಣ, ಅನುಭವ ಅಥವಾ ಸಂಶೋಧನಾಸಕ್ತಿ ಹೊಂದಿದ್ದು; ಸಂವಾದ ಮತ್ತು ಪ್ರಶ್ನೋತ್ತರ ಸರಣಿಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಉತ್ಸುಕರಾಗಿ ಭಾಗವಹಿಸುವಂತಿರಬೇಕು.

☞ ನೃತ್ಯ ಸಂಶೋಧಕರ ಒಕ್ಕೂಟದ ಸದಸ್ಯರು ಅಭ್ಯರ್ಥಿಗಳಾಗಿ ಭಾಗವಹಿಸಿ ಪ್ರಮಾಣಪತ್ರ ಮಾತ್ರ ಪಡೆದುಕೊಳ್ಳುವುದಾದಲ್ಲಿ ಅವರಿಗೆ ಉಚಿತ ಪ್ರವೇಶವಿದೆ. ಆದರೆ ಸಮ್ಮೇಳನದ ಸಂದರ್ಭದ ವಿಶೇಷ ಸಂಚಿಕೆ ಮತ್ತು ಸಂಶೋಧನಾ ನಿಯತಕಾಲಿಕೆಯನ್ನು ಕೊಂಡುಕೊಳ್ಳತಕ್ಕದ್ದು. ಉಳಿದ ಅಭ್ಯರ್ಥಿಗಳ ಪ್ರವೇಶ ಶುಲ್ಕ ನಿಯತಕಾಲಿಕೆ ಮತ್ತು ಸಂಚಿಕೆಗಳ ಮೊತ್ತವನ್ನು ಒಳಗೊಂಡಿರುತ್ತದೆ.

ಸಮ್ಮೇಳನದಲ್ಲಿ ಭಾಗವಹಿಸುವ ನಿಮ್ಮ ಸಂಸ್ಥೆ/ ಕಾಲೇಜು/ವಿಶ್ವವಿದ್ಯಾಲಯದ ಅಭ್ಯರ್ಥಿಗಳ (ವಿದ್ಯಾರ್ಥಿ/ ಉಪನ್ಯಾಸಕ) ನೋಂದಣಿಯನ್ನು ಈ ಕೆಳಗಿನ ಮಾದರಿಯಂತೆ ಬರೆದು ಕಳುಹಿಸಿಕೊಡಿ.

◢ ಹೆಸರು: ______________________

◢ ವಿದ್ಯಾರ್ಹತೆ: ______________________

◢ ಸಂಶೋಧನ ಹಿನ್ನಲೆ: ______________________

◢ ಭಾಗವಹಿಸಲಿಚ್ಛಿಸುವ ಕುರಿತು ಆಸಕ್ತಿಯ ವಿವರ: ______________________

◢ ಸಂಪರ್ಕ ವಿಳಾಸ: ______________________

◢ ಈ ಮೈಲ್ ವಿಳಾಸ: ______________________

◢ ದೂರವಾಣಿ/ಮೊಬೈಲ್ ಸಂಖ್ಯೆ: ______________________

◢ ಇತರೆ/.. ______________________

ಸಮ್ಮೇಳನದ ವಿವಿಧ ವಿಚಾರಗಳ ಪ್ರಾಯೋಜಕತ್ವ ವಹಿಸಿಕೊಳ್ಳುವವರಿಗೆ ಅವಕಾಶವಿದೆ ದೇಣಿಗೆಗಳನ್ನು, ಧನಸಹಾಯವನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗುವುದು ಮತ್ತು ಸಮ್ಮೇಳನದ ಸಮಯದಲ್ಲಿ ಸೂಕ್ತವಾದ ಮಾನ್ಯತೆಗಳೊಂದಿಗೆ ದಾನಿಗಳನ್ನು ಸ್ಮರಿಸಲಾಗುವುದು.

**ಬ್ಯಾಂಕ್ ವಿವರ:** ದಿ ಫೆಡರಲ್ ಬ್ಯಾಂಕ್ ಲಿಮಿಟೆಡ್, ಪುತ್ತೂರು

**ಅಕೌಂಟ್ ನಂಬರ್:** ನೂಪುರ ಭ್ರಮರಿ – 18940100002234

**ಐಎಫ್‌ಎಸ್‌ಸಿ ಕೋಡ್:** FDRL0001894

ಹೆಚ್ಚಿನ ವಿವರಗಳಿಗೆ ಕೆಳಕಂಡ ವಿಳಾಸವನ್ನು ಸಂಪರ್ಕಿಸುವುದು.

**ಈ ಮೈಲ್:** editor@noopurabhramari.com

www. noopurabhramari.com

ದೂರವಾಣಿ: 9964140927,

ಮನೋರಮಾ ಬಿ.ಎನ್,

ಆಡಳಿತ ವಿಭಾಗ ಮುಖ್ಯಸ್ಥೆ ಮತ್ತು ಸಂಚಾಲಕರು

ನೂಪುರ ಭ್ರಮರಿ

...ನರ್ತನ ಜಗತ್ತಿಗೊಂದು ಪರಿಭ್ರಮಣ

**ಪ್ರವೇಶಗಳನ್ನು ಕಳುಹಿಸಬೇಕಾದ ವಿಳಾಸ**

**ನೂಪುರ ಭ್ರಮರಿ ನೃತ್ಯ ಸಂಶೋಧಕರ ಒಕ್ಕೂಟ**

(ಬೆಂಗಳೂರು ವಿಭಾಗ)

C/o ಶಾಲಿನಿ ವಿಠಲ್

ಗೌರೀ ನಾಟ್ಯಶಾಲಾ,

ನಂ. 68(29), 2ನೇ ಅಡ್ಡರಸ್ತೆ

ಗವಿಪುರಂ ಬಡಾವಣೆ

ಬಸವನಗುಡಿ, ಬೆಂಗಳೂರು 560 019